ಕರ್ನಾಟಕ ಸರ್ಕಾರ

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: DTE-ADMIO EST(1A)/58/2020/527

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 10.11.2020

**ಸುತ್ತೋಲೆ**

**ವಿಷಯ :** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದ ಸಂಸ್ಥೆಗಳ ಪ್ರಾಂಶುಪಾಲರುಗಳು ಸರ್ಕಾರ ಪ್ರತ್ಯೋಜಿಸಿರುವ ಅಧಿಕಾರ ವ್ಯಾಪ್ತಿಯನ್ನು ಮೀರಿ ನೇಮಕಾತಿ / ಮಂಜೂರಾತಿ ಮಾಡಿ, ಘಟನೋತ್ತರ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸುತ್ತಿರುವ ಬಗ್ಗೆ.

*****

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ ಸರ್ಕಾರ ಪ್ರತ್ಯೋಜಿಸಿರುವ ಅಧಿಕಾರ ವ್ಯಾಪ್ತಿಯನ್ನು ಮೀರಿ ಸಂಸ್ಥೆಗಳಲ್ಲಿ ಕೆಳಕಂಡಂತೆ ನೇಮಕಾತಿ ಮತ್ತು ಮಂಜೂರಾತಿ ಮಾಡಿ, ತದನಂತರ ಘಟನೋತ್ತರ ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಇಲಾಖೆಗೆ ಸಲ್ಲಿಸುತ್ತಿರುವುದು ಮತ್ತು ಸಲ್ಲಿಸದೇ ಇರುವುದು, ಅಲ್ಲದೆ ಇತರೆ ಪ್ರಸ್ತಾವನೆಯನ್ನು ತಡವಾಗಿ ಸಲ್ಲಿಸುತ್ತಿರುವುದು ಕಂಡುಬಂದಿರುತ್ತದೆ.

1. ಭದ್ರತಾ ಸಿಬ್ಬಂದಿಗಳ ನೇಮಕಾತಿ ಮಾಡಿರುವುದು ಮತ್ತು ಮುಂದುವರೆಸುವುದು;
2. ಗ್ರೂಪ್-ಡಿ ಸಿಬ್ಬಂದಿಗಳಳನ್ನು ನೇಮಕಾತಿ ಮಾಡಿರುವುದು;
3. ಎಐಸಿಟಿಇ ವೇತನ ಶ್ರೇಣಿ ನಿಗಧಿ ಮತ್ತು ಮುಂಗಡ ವೇತನ ಬಡ್ತಿ ಮಂಜೂರು ಮಾಡಿರುವುದು;
4. ಸಣ್ಣ ಕುಟುಂಬ ಯೋಜನೆ ಅನುಸರಿಸಿರುವ ಸಂಬಂಧ ವಿಶೇಷ ವೇತನ ಬಡ್ತಿ ಮಂಜೂರು ಮಾಡಿರುವುದು;
5. ಅಂಗವಿಕಲ ವಾಹನ ಭತ್ಯೆ ಮಂಜೂರಾತಿ;
6. ಖಾಲಿಯಿರುವ ಹುದ್ದೆಗಳಿಗೆ ಕೆಸಿಎಸ್ಆರ್ ನಿಯಮ 32 ಮತ್ತು 68 ರಡಿಯಲ್ಲಿ ನೇಮಕ ಮಾಡಿರುವುದು;
7. ಪ್ರಭಾರ ಭತ್ಯೆ ಮಂಜೂರು ಮಾಡಿರುವುದು;
8. ರಜೆ ಮಂಜೂರು ಮಾಡಿರುವುದು;
9. ಖಾಯಂಪೂರ್ವ ಅವಧಿ / ಸ್ಥಾನಪನ್ನ ಅವಧಿ ಘೋಷಣೆ / ಕಾಲಬದ್ಧ ವೇತನ ಬಡ್ತಿ / ಸ್ಥಗಿತ ವೇತನ ಬಡ್ತಿ / ರಜೆ ಮಂಜೂರಾತಿ ಮತ್ತು ಅನಧಿಕೃತ ಗೈರು ಹಾಜರಿ ಬಗ್ಗೆ ಪ್ರಸ್ತಾವನೆಯನ್ನು ತಡವಾಗಿ ಸಲ್ಲಿಸುತ್ತಿರುವುದು.

ಆದಕಾರಣ ಇನ್ನು ಮುಂದೆ ಪ್ರಾಂಶುಪಾಲರಿಗೆ ಪ್ರತ್ಯೋಜಿಸಿರುವ ಅಧಿಕಾರ ವ್ಯಾಪ್ತಿಯನ್ನು ಮೀರಿ ಸಂಸ್ಥೆಯಲ್ಲಿ ನೇಮಕಾತಿ ಮತ್ತು ಮಂಜೂರಾತಿಯನ್ನು ಇಲಾಖೆಯ ಪೂರ್ವಾನುಮತಿ ಇಲ್ಲದೇ ಮಾಡಿದಲ್ಲಿ ಹಾಗೂ ತಡವಾಗಿ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಕೆಸಿಎಸ್(ಸಿಸಿಎ) ನಿಯಮ 1957 ಗಳನ್ವಯ ಶಿಸ್ತುಕ್ರಮ ಜರುಗಿಸಲಾಗುವುದೆಂದು ಸೂಚಿಸಿದೆ.

**ಆಯುಕ್ತರು,**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

**ಇವರಿಗೆ:-**

ತಾಂತ್ರಿಕ ಶಿಕ್ಷಣ ಅಧೀನ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳ ಪ್ರಾಂಶುಪಾಲರುಗಳಿಗೆ.

...2/-

ಪ್ರತಿ:-

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
2. ಜಂಟಿ ನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
3. ನೋಡಲ್ ಅಧಿಕಾರಿ, ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ಸುತ್ತೋಲೆಯಲ್ಲಿ ಇಲಾಖಾ ವೈಬ್‌ಸೈಟ್‌ನಲ್ಲಿ ಅಳವಡಿಸಲು ಕ್ರಮಕೈಗೊಳ್ಳುವುದು)
4. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.